RegdNo B G 155 Sri 15—6—1965

# ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅಮೆಸ್ಟ್ರುವಸ್ಕೋದಾರ್ ಎಂ ಎ ಸುಬ್ಬರಾಯುರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣಶಾವ್ 2ಪೈ

### ಕಾಲದರ ಪರಿಸ್ಥಿತಿ

ಮೈಸೂರು ನಗರದಲ್ಲಿ ತಾ|| 13 ರಲ್ಲಿ 18 ಮಂದಿಗೆ ತಗಲಿತು. ಇವೇನೂ ಇಲ್ಲ, 759 ಕಾಲರಾ ನಿರೋಧಕ ಇನಾಕ್ಯು ಲೇಷನ್ ಮಾಡಲಾಯಿತು.

★

### ಎಣ್ಣೆ ಸ್ಥಳ

ಸೂರತ್ — ಗುಜರಾತಿನ ಕಲೋಲು ಎಣ್ಣೆ ಭೂಮಿಗೆ 15 ಮೈಲಿ ದೂರದಲ್ಲಿ ಜುಲಾರ್ಜ ಗ್ರಾಮದ ಹತ್ತಿರ ಸಿಕ್ಕಿರುವ ಎಣ್ಣೆ ಭೂಮಿಯು ಭಾರತದಲ್ಲೇ ಅತಿ ದೊಡ್ಡದೆಂದೂ, ಎಸ್ಸಾದಲ್ಲಿನ ಬಹು ದೊಡ್ಡವುಗಳಲ್ಲಿ ಒಂದೆಂದೂ ಭಾರತದ ಪೆಟ್ರೋಲು ಮಂತ್ರಿ ಕಬೀರರು ಹೇಳಿದರು.

### ನಾಲ್ಕನೇ ಯೋಜನೆಗೆ

ನವದೆಹಲಿ — ನಾಲ್ಕನೇ ಪಂಚವಾರ್ಷಿಕ ಯೋಜನೆಯು ವಿವಿಧ ವಿಚಾರಗಳ ವ್ಯಾಪಕ ಅಧ್ಯಯನಕ್ಕಾಗಿ ವಿಶ್ವ ಬ್ಯಾಂಕು ತಂಡವು ಒಂದೆರಡು ದಿನಗಳಲ್ಲಿ ಬರಲಿದೆ.

★

### ಸೂಕ್ತ ಉದಾರ ಧೋರಣೆ

ಬೊಂಬಾಯಿ — ಸುಪ್ರಸಿದ್ಧ ಕೈಗಾರಿಕೋದ್ಯಮಿ ಶ್ರೀ ವೀರ್ ಪ್ರಕಾಶರು ಜಲ ಉಪಯೋಗಿಸಿ ಮಕ್ಕಳಿಗೆ ನಿವಾಸ ಮತ್ತು ವಿನೋದ ಪಿಕ್‌ನಿಕ್ ಕೇಂದ್ರವಾಗಿ ಉಪಯೋಗಿಸಲು ಭಾರತ ಮಕಾಂದ ಮೂಲಕ ನೆಹರೂ ಸ್ಮಾರಕ ನಿಧಿಗೆ ಡೊನೇಷನ್ ಆಗಿ ಕೊಡುವುದಾಗಿ ತಿಳಿಸಿದ್ದಾರೆ: ಆವರು ಇದನ್ನು 8 ಲಕ್ಷ 2 ಸಾವಿರ ರೂಗಳಿಗೆ ಕೊಂಡುಕೊಂಡರು; ಇದು ಭಾರತದಲ್ಲಿ ಕಟ್ಟಲ್ಪಟ್ಟ ಪ್ರಕೃತಿ ಹಡಗು ಮತ್ತು ನೆಹರೂರು ಇದನ್ನು ನೀರಿನಲ್ಲಿ ದೇಲಿಸಿದರು.

### ಆಯುಬಂಧ ರಕ್ಷಣೆ

ಕೈರೋ — ಪಾಕಿಸ್ತಾನ ಅಧ್ಯಕ್ಷ ಅಯೂಬರು ಒಂದಾಗಿ ವಿಮಾನ ನಿಲ್ದಾಣದಲ್ಲಿ ಒಲವಾದ ರಕ್ಷಣಾ ವ್ಯವಸ್ಥೆ ಇಕ್ಕಿ: ಪದ್ದಿಗಾರಲ್ಲರೂ ನಿಲ್ದಾಣದಿಂದ ಕಟ್ಟಿದಲ್ಲಿರುವಂತೆ ತಿಳಿಸಲ್ಪಟ್ಟಿದ್ದರು

### ಕಾವೇರಿಜಲ ನುಡಿ

ನವದೆಹಲಿ — ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಭಾಷಾ ವಿಂಗಡಣೆಯನ್ನು ಹೇಗೆ ಜಾರಿಗೆತರಬೇಕೆಂಬ ವಿಷಯು ಭಾರತ ಸಂಕಾಂಕ್ಕೆ ಸೇರಿದ್ದೆಂದ ಕಾಂಗ್ರೆಸು ಅಧ್ಯಕ್ಷ ಕಾಮರಾಜ್ ಹೇಳಿದರು

★

### ಅಮೇರಿಕಾ ಪ್ರವಾಸವಿಲ್ಲ

ಒಟವಾ — ಅಮೇರಿಕಾ ಅಧ್ಯಕ್ಷ ಜಾನ್‌ಸನರು ಭಾರತ ಪ್ರಧಾನಿ ಶಾಸ್ತ್ರಿಗಳನ್ನು ಶರತ್ಕಾಲದಲ್ಲಿ ಅಮೇರಿಕಾಕ್ಕೆ ಭೇಟಿ ಕೊಡಲು ಇತ್ತ ಆಹ್ವಾನವನ್ನು ಪ್ರಧಾನಿಗಳು ತಿರಸ್ಕರಿಸಿದರು; ಆಗ ಪಾರ್ಲಿಮೆಂಟು ಇರುವುದರಿಂದ ಬರಲಾಗುವುದಿಲ್ಲವೆಂದರು.

★

### ಬ್ರಿಟನ್ನಿನ ಪ್ರಯತ್ನ

ನವದೆಹಲಿ — ಕಚ್ ಸಮಸ್ಯೆ ಪರಿಹಾರಾಂದ ಬಗ್ಗೆ ಬ್ರಿಟಿಷ್ ಯೋಜನೆ ಕುರಿತ ಬ್ರಿಟಿಷ್ ಹೈ ಕಮಿಷನರನು ಎದ್ದೇ ಶಾಂಗ ಕಾರ್ಯದರ್ಶಿಗಳೊಡನೆ ಮಾತುಕತೆ ನಡೆಸಿದರು.

### ಸಮಿತಿ ಸ್ಥಾಪನೆ

ನವದೆಹಲಿ — ಸೀಲೋನಿನಲ್ಲಿರುವ ಭಾರತಮೂಲ ಜನರ ಬಗ್ಗೆ ಆದ ಒಪ್ಪಂದವನ್ನು ಜಾರಿಗೆ ತರಲು ಭಾರತ-ಸೀಲೋನು ಒಂದು ಜಂಟಿ ಸಮಿತಿ ನೇಮಿಸಿದೆ.

### ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಷ್ಟಾವಧಾನವಿದ್ವಾನ್ ಧರ್ಮಾಧಿಕಾರಿ ಕಾಶಿಜಗನ್ನಾಥಶಾಸ್ತ್ರಿ ಜ್ಯೋತಿಶ್ವಿದ್ವನ್ಮಣಿ ಪಂಡಿತ ಕೃಷ್ಣಜೋಯಿಸರಿಂದ

16 ಬುಧವಾರ ಬಿದಿಗೆ ಪೂರ್ವಾಷಾಢ

## ಇಂದಿನ ಪರಿಸ್ಥಿತಿಯಲ್ಲಿ ಚೀನಾ ಪ್ರಧಾನಿಯೊಡನೆ ಭೇಟಿ ಇಲ್ಲ

ಕೈರೋ — ಅಲ್ಜೀರ್ಸ್‌ನಲ್ಲಿ ಏಷ್ಯಾ-ಆಫ್ರೋ ಸಮ್ಮೇಳನದಲ್ಲಿ ಚೀನಾ ಪ್ರಧಾನಿ ಚೌ ಎನ್ ಲೈರನ್ನು ಭೇಟಿಯಾಡುವಂತೆ ಅಧ್ಯಕ್ಷ ನಾಜರ್ ಪ್ರಧಾನಿ ಶಾಸ್ತ್ರಿಗಳಿಗೆ ಕೊಟ್ಟ ಸಲಹೆಗೆ ಅವರು ಉತ್ತೇಜನ ಕೊಡಲಿಲ್ಲ — ಚೀನವು ಭಾರತ ಗಡಿ ಮೇಲೆ 62 ರಲ್ಲಿ ಮಾಡಿರುವ ಆಕ್ರಮಣದಿಂದ ವಾಪಸ್ಸಾಗುವ ತನಕ ಚೀನಾ ಪ್ರಧಾನಿಯೊಡನೆ ಭೇಟಿ ನಡೆಸುವುದು ಸಾಧ್ಯವಿಲ್ಲವೆಂದು ಖಂಡಿತವಾಗಿ ತಿಳಿಸಿದರು.

### ರಾಜಾಜಿಯವರ ನುಡಿ

ಚಿಂಗಲ್‌ಪೆಟ್ — 1967 ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಎದುರು ಹೋರಾಡಲು ಸ್ವತಂತ್ರ ಪಾರ್ಟಿ ಡಿ ಎಂ ಕೆ ಜೊತೆಯಲ್ಲಿ ಪೂರ್ಣ ಚುನಾವಣಾ ಒಪ್ಪಂದ ಮಾಡಿಕೊಳ್ಳುವುದೆಂದು ಸ್ವತಂತ್ರ ಪಕ್ಷದ ನಾಯಕ ರಾಜಗೋಪಾಲಾಚಾರ್ಯರು ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು — ತನ್ನ ಮುಂದೆ ಕುಳಿತಿದ್ದ ಮಕ್ಕಳನ್ನು ಕುರಿತು, ಬಹುದೊಡ್ಡ ವಿದೇಶೀ ಸಾಲವಾ ಮಾಡಿ ಕಾಂಗ್ರೆಸು ಅವರನು ಅಧಿಕಾರಿ ಮಾಡಿರುವರೆಂದು ಹೇಳಿದರು; ಭಾಷಾ ಗೊಂದಲವೂ ಅವರ ಭವಿಷ್ಯವನ್ನು ಅಪಾಯ ಸ್ಥಿತಿಯಲ್ಲಿಟ್ಟಿದೆ ಎಂದೂ ಹೇಳಿದರು.

### ಕ್ರಿಕೆಟ್ ಪ್ರವಾಸ

ಮದರಾಸು — ಜಳಗಾಲದಲ್ಲಿ ವೆಸ್ಟ್ ಇಂಡೀಸು ಟೀಮು ಭಾರತದಲ್ಲಿ ಪ್ರವಾಸ ನಡೆಸಿ ಕೆಲವು ಮ್ಯಾಚುಗಳನ್ನಾದರೂ ಆಡಲು ಅನುಕೂಲಿಸುವಂತೆ ಭಾರತ ಹಣಕಾಸಿನ ಮಂತ್ರಿ ಕೃಷ್ಣಮಾಚಾರ್ಯರೊಡನೆ ಚರ್ಚಿಸಲಾಯಿತು

### ಎಚ್ ಜಿ ಓ

ಬೆಂಗಳೂರು — ಜಳವಳಕಾರಿ ಎಚ್ ಜಿ ಓ ಗಳ ಮೇಲೆ ತೀವ್ರ ತೆಗೆದುಕೊಳ್ಳಲಾಗುವುದೆಂಬ ಸರಕಾರದ ಬೆದರಿಕೆ ಅವರನ್ನು ಮತ್ತೂ ಕಠಿಣಗೊಳಿಸಿದೆ — ಈ ತಿಂಗಳ ಕಡೆಯಲ್ಲಿ ಮುಷ್ಕರಕ್ಕೆ ನಿರ್ಣಯ ತೆಗೆದುಕೊಳ್ಳಲಾಗುವುದು : ಮುಂದಿನ ಶನಿವಾರ ಮುಖ್ಯಮಂತ್ರಿಗಳ ನಿವಾಸದ ಮುಂದೆ ಸಾಮೂಹಿಕ ಪ್ರದರ್ಶನ, ವಿಧಾನ ಸೌಧದ ಮುಂದೆ ತಾಡಕಂಡವಾಗಿ ಅನ್ನ ಸತ್ಯಾಗ್ರಹದ ಏರ್ಪಾಡಿದೆ

### ಜಾಹ್ನವಿ

ಬೆಂಗಳೂರು — ಆಕ್ಟ್ರಾಯಿ ಸುಂಕ ಕೊಡದೆ ಸಗಾಕ್ಕೆ ತಂಬಾಕನ್ನು ತಂದ ಇಬ್ಬರಿಗೆ ಎಲ್ಲಾ ಒಟ್ಟು ರೂ 8112 ಜುಲ್ಮಾನೆ ವಿಧಿಸಲಾಯಿತು

### ಮಹಾಂತಾದಿ ಪ್ರವಾಸ

ಗುಲ್ಬರ್ಗ — ಮುದ್ದಾಸು ಗೌರ್ನರು ಶ್ರೀಮನ್ಮಹಾಂತಾದಿ ಜಯಚಾಮರಾಜೇಂದ್ರ ಒಡೆಯರವರು ಇಲ್ಲಿಗೆ 20 ಮೈಲಿ ದೂರದ ದೇವಲ್ ಗಂಗಾಪುರದ ದೇವಸ್ಥಾನಕ್ಕೆ ಗುರುವಾರ ಭೇಟಿ ಕೊಡುವರು

### ಅಲ್ಜೀರ್ಸ್ ಸಮ್ಮೇಳನ

ಕೈರೋ — ಅಲ್ಜೀರ್ಸ್ ಸಮ್ಮೇಳನಕ್ಕೆ ಎಷ್ಟೂ ಸೇರಿಸಬಾರದೆಂಬ ಚೀನಾದ ಸೂಚನೆಯನ್ನು ತಿರಸ್ಕರಿಸಿ, ಸೇರಿಸಬೇಕೆಂಬ ಭಾರತದ ಸೂಚನೆಯನ್ನು ಎಲ್ಲ 130 ರಾಷ್ಟ್ರಗಳು ತಿರಸ್ಕರಿಸಿವೆ.

16-6-65
No Holiday

## ಭಾಷಾ ಸಮಸ್ಯೆಗೊಂದು ರಾಮಬಾಣ

ವ್ಯಕ್ತಾವ್ಯಕ್ತಿ ಸ್ವರೂಪಸ್ಯ ನಿತ್ಯಸ್ಯ ಪರಮಾತ್ಮನಃ |

ಭಾಷಾ ವಿಭಾತಿ ಮಾ ಭಾಷಾ ಸಾ ಭಾಷಾ ಭಾತು ಭಾಂತೇ ॥

ಅಂಗ್ಲಾ ಭಾಷೆಗೆ ಬದಲಾಗಿ ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಸಮ್ಮ ( ಘನ ) ಸಂಕಾಂವು ಇದೇ ಪರ್ವ ಜನವರಿ 26 ರಂದು ಘೋಷಿಸಿತು ; ಈ ಭಾಷೆಯನ್ನು ರಾಷ್ಟ್ರ ಭಾಷೆಯನ್ನಾಗಿ ಘೋಷಿಸಲು ಇಲ್ಲಿ ಎಷ್ಟು ಮಂದಿ ಪುಷ್ಪೀಕರಿಸಿದವರಿದ್ದಾರೆಯೋ ಅಷ್ಟೇ ಮಂದಿ ಅದನ್ನು ವಿರೋಧಿಸುವವರು ಇದ್ದಾರೆನ್ನುವುದು ಸತ್ಯ

ಹೀಗೇಕಾಯಿತು ? ನಾವಭಿಮಾನೀ ರಾಷ್ಟ್ರವೊಂದು, ಅದರಲ್ಲೂ ಉಚ್ಚ ಸಂಸ್ಕೃತಿಯು ಭಾರತದೇಶ ತನ್ನದೇ ಆದ ರಾಷ್ಟ್ರಭಾಷೆ ಹೊಂದಿರುವುದು, ಹೊಂದಲೇ ಬೇಕಾದದ್ದು ಅಷ್ಟೇನೂ ಅತಿಶಯೋಕ್ತಿಯೇನಲ್ಲ : ಅಂದಮೇಲೆ ನಮ್ಮಲ್ಲಿ ರಾಷ್ಟ್ರಾಯತ್ವದ ಕಲ್ಪನೆ ಅಳಿಸಿಹೋಗಿರುವ ಹ್ಯೋಕಿಕ ಇದಾಗಿದೆ ಎನ್ನಬಹುದು,

ಒಂದು ರಾಷ್ಟ್ರವೆಂದರೆ, ಒಂದೇ ಜನಾಂಗ, ಒಂದೇ ಸಂಸ್ಕೃತಿ, ನಡತೆ ನೀತಿ, ಆಚಾರ, ವ್ಯವಹಾರ, ಮತ್ತು ಒಂದೇ ಭಾಷೆಗಳಿದ್ದರೆ ಮಾತ್ರ ; ಆದ್ದರಿಂದ ಯಾವುದೇ ರಾಷ್ಟ್ರ ತನ್ನದೇ ಆದ ಭಾಷೆಯನ್ನು ಹೊಂದಿರಲೇ ಬೇಕಾದದ್ದು ಅತ್ಯವಶ್ಯಕ ಎನ್ನುವುದನ್ನು ಪ್ರತಿಯೊಬ್ಬ ರಾಷ್ಟ್ರೀಯನೂ ಕ್ಷಿಪ್ರವೇ ಒಪ್ಪಲೇಬೇಕು ; ರಾಷ್ಟ್ರೀಯ ಕಲ್ಪನೆ ಉಂಟಾಗಲು ಭಾಷೆಯೂ ಒಂದು ಅಂಗ , ಆದ್ದರಿಂದ ಅಂತಹುದೊಂದು ಸ್ವಾಭಿಮಾನೀ ಭಾಷೆಯನ್ನು ನಾವು ತುರ್ತಾಗಿ ಪಡೆಯಬೇಕಾಗಿದೆ ; ಹೀಗಾಗಿದ್ದ ಮೇಲೆ ಹಿಂದಿಯೇ ಏಕೆ ರಾಷ್ಟ್ರಭಾಷೆಯಾಗಬಾರದು ? ಅದಕ್ಕೇನಿಷ್ಟು ಅಡ್ಡಿ ? ಅನ್ನುವುದನ್ನು ಪರಿತೀಲಿಸೋಣ : ಹಿಂದಿ ರಾಷ್ಟ್ರಭಾಷೆಯಾಗುವ ಬಗ್ಗೆ ನಾನಾ ಸಮಸ್ಯೆ ಮತ್ತು ಅಭಿಪ್ರಾಯಗಳಿವೆ. [ ನಾಳೆ ಸಂಚಿಕೆ ನೋಡಿ ]



ಗೋರಕ್ಷಣೆ ಸಾಧಿಸಲಿರುವ ಕಾರ್ಯಗಳು ಹೆಚ್ಚಿನವಾಗಿ ಫಲಿಯುಲಿ


ವುಡ್‌ಲ್ಯಾಂಡ್ ಜನವರಿಯ 4 ನೇ ವಾರ

ಶಿ ಸು ★

ಪ್ರೇಗ್ನಿಕರಿಂದ ಶುಂಬಿತುಳುಕಾವ ಚಿತ್ರವಂದಿರದಲ್ಲಿ ಪ್ರದರ್ಶಿತವಾಗುತ್ತಿದೆ

ಸುಂದರ ದೃಶ್ಯಗಳು, ಸಮಯೋಚಿತ ಸಂಗೀತ, ಆಕರ್ಷಣೀಯ ನೃತ್ಯಗಳು,

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

★

ಜಾನ್‌ವರ್ JANWAR

ಪಾತ್ರ– ಶಮ್ಮಿ ಕಪೂರ್, ರಾಜಶ್ರೀ,ಜೀತೇಂದ್ರ,ಜೀಂದ್ರನಾಥ್, ಪೃಥ್ವೀರಾಜ್

ಅಪೆರ— ಜಯಪ್ರದ 3 ನೇ ವಾರ

ಅಕ್ಕನೋಳ ಕನ್ನಡ ಚಿತ್ರಂತ್ಸ — — ಪ್ರತಿದಿನ 3 ಆಟಗಳು

ನನ್ನ ಕರ್ತವ್ಯ

ತಾರಾಗಣ — ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು

ಚಂದ್ರಬಾಬು, ಸಂಧ್ಯಾ, ಜಯಲಲಿತ

SHAKTI

SUDHA

A Superb Tonic



Help The Gorakshana

— ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ —


Edited, printed and published by Dharma Prachara Nirata M. S. Krishna Rao (prop) at the Satyavadi Press, Chamarajapuram, Mysore 4